# ವಿಜಯಗಳನ್ನು ಆಚರಿಸುವದು

## ೧. ಪ್ರೇರಣೆ

ವಿಜಯಗಳನ್ನು ಆಚರಿಸುವದು ನಾವು ಯಾಕೆ ಗುರಿಯನ್ನು ನಿಗದಿಪಡಿಸಿಕೊಂಡಿದ್ದೇವೆ ಮತ್ತು ಅವುಗಳಿಗೆ ಪ್ರಥಮ ಆದ್ಯತೆಯನ್ನು ಕೊಟ್ಟಿದ್ದೇವೆ ಎಂಬದನ್ನು ನಮಗೆ ಜ್ಞಾಪಕಪಡಿಸುತ್ತದೆ. ಗುರಿ ಯಾಕೆ ಪ್ರಾಮುಖ್ಯವಾಗಿತ್ತು ಎಂಬದನ್ನು ಮರೆಯುವದು ಸಲುಭವಾಗಿರುತ್ತದೆ, ಆದರೆ ಅದನ್ನು ಮರೆಯುವದು ಕೆಲಸದ ಎಲ್ಲಾ ಪ್ರಾಮುಖ್ಯತೆಯನ್ನು ನಿರರ್ಥಕ ಮಾಡುತ್ತದೆ. ನಾವು ಮಾಡುವ ಕಾರ್ಯ ಮಕ್ಕಳು ಯೇಸು ಕ್ರಿಸ್ತನ ಕಡೆಗೆ ಯಾಕೆ ನಡೆಸುತ್ತದೆ ಎಂಬದನ್ನು ನಾವು ನೆನಪಿಸಿಕೊಳ್ಳುವಾಗ, ಇನ್ನೂ ಅಧಿಕ  ಕಾರ್ಯ ಮಾಡುವ ಪ್ರೇರಣೆ ನಮಗೆ ದೊರೆಯುತ್ತದೆ.

## ೨. ಹೃದಯದ ಕಡೆಗೆ ಗಮನ ಕೊಡಬೇಕು

ವಿಜಯಗಳನ್ನು ಆಚರಿಸುವದು ನಾವು ಎದುರುನೋಡುತ್ತಿರುವ ಹೃದಯದ ಬದಲಾವಣೆಯ ಕಡೆಗೆ ಗಮನಹರಿಸಲು ಸಹಾಯ ಮಾಡುತ್ತದೆ. ನಾವು ಗುರಿಯನ್ನು ನಿಗದಿಪಡಿಸುತ್ತೇವೆ, ಅದನ್ನು ಸಾಧಿಸಲು ಯೋಜನೆಗಳನ್ನು ರೂಪಿಸುತ್ತೇವೆ ಮತ್ತು ನಾವು ಬಯಸಿದ ಫಲಿತಾಂಶಗಳನ್ನು ಕಾಣುತ್ತೇವೆ. ಆ ಫಲಿತಾಂಶಗಳನ್ನು ನಾವು ಆಚರಿಸುವಾಗ, ನಾವು ಸುಲಭವಾಗಿ ಹೃದಯದ ಬದಲಾವಣೆಗಳ ಕಡೆಗೆ ಗಮನ ಕೊಡುತ್ತೇವೆ ಮತ್ತು ಲೌಕಿಕ ಮೌಲ್ಯಗಳಿಂದ ಮಲಿನಗೊಳ್ಳುವದಿಲ್ಲ

## ೩. ಶ್ಲಾಘನೆ

ವಿಜಯಗಳನ್ನು ಆಚರಿಸುವದು ನಮ್ಮ ಇಡೀ ತಂಡ ಒಳ್ಳೆಯ ಕೆಲಸದಲ್ಲಿ ಮುಂದುವರೆಯಲು ಬೇಕಾದ ಪ್ರೋತ್ಸಾಹವನ್ನು ಒದಗಿಸುತ್ತದೆ. ಸ್ವೇಚ್ಛಾನುಸಾರ ಕೆಲಸ ಮಾಡುವವರು ಶ್ಲಾಘನೆಗೆ ಒಳಗಾಗುವಾಗ ಮತ್ತು ಅವರ ಪ್ರರಿಶ್ರಮಗಳು ಗುರುತಿಸಲ್ಪಡುವಾಗ, ಸಭೆಯ ಮುಂದಿನ ಚಟುವಟಿಕೆ ಅಥವಾ ಯೋಜನೆಯಲ್ಲಿ ಮತ್ತಷ್ಟು ಚಟುವಟಿಕೆಯುಳ್ಳವರಾಗುತ್ತಾರೆ. ಪ್ರತಿಯೊಬ್ಬರು ಜೊತೆಯಲ್ಲಿರುವವರು ಶ್ಲಾಘನೆಗೆ ಪಾತ್ರರಾಗುವಂತೆ ಮಾಡುವ ಕಾರ್ಯದಲ್ಲಿ ಭಾಗಿಯಾಗಬಹುದು.

## ೪. ಐಕ್ಯತೆ

ವಿಜಯಗಳನ್ನು ಆಚರಿಸುವದು ನಮ್ಮ ತಂಡವನ್ನು ಸಕಾರಾತ್ಮಕ ಫಲಿತಾಂಶದ ಸುತ್ತಲೂ ಐಕ್ಯಗೊಳಿಸುತ್ತದೆ. ಒಂದುವೇಳೆ ನಮ್ಮ ತಂಡದಲ್ಲಿರುವ ಸದಸ್ಯರಲ್ಲಿ ಯಾರಿಗಾದರೂ ಹೊಂದಿಕೊಳ್ಳಲ್ಲು ಸಮಸ್ಯೆಯಾಗುತ್ತಿದ್ದರೆ, ನಾವು ಹುದುವಾದ ಗುರಿ ಸಾಧಿಸಿದ್ದೇವೆ ಎಂಬದನ್ನು ಜ್ಞಾಪಕಪಡಿಸುವದು, ಪುನಃ ಎಲ್ಲರೂ ಒಟ್ಟುಗೂಡಲು ಸಹಾಯ ಮಾಡುತ್ತದೆ.

## ೫. ಯಶಸ್ಸು

ವಿಜಯಗಳನ್ನು ಆಚರಿಸುವದು ನಾವು ಯಶಸ್ವಿಯಾಗಿರುವ ಸೇವೆಯಲ್ಲಿದ್ದೇವೆ ಎಂಬದನ್ನು ನಮ್ಮ ತಂಡದವರಿಗೆ ಜ್ಞಾಪಕಪಡಿಸುತ್ತದೆ. ಜನರು ಯಶಸ್ವೀ ಸೇವೆಗಳಲ್ಲಿ ಭಾಗಿಯಾಗಬೇಕೆಂದು ಬಯಸುತ್ತಾರೆ! ಒಂದುವೇಳೆ ನಮ್ಮ ಸಭೆ ಅಥವಾ ಸೇವೆ ಬೇರೆ ಯಾವುದಾದರೂ ವಿಷಯದಲ್ಲಿ ಕಷ್ಟಪಡುತ್ತಿದ್ದರೂ, ನಾವು ಯಶಸ್ವಿಯಾಗಿರುವ ಸೇವೆಯಲ್ಲಿ ಭಾಗಿಯಾಗಿದ್ದೇವೆ ಎಂಬ ತಿಳುವಳಿಕೆಯನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳುವದು ಆತ್ಮವಿಶ್ವಾಸವನ್ನು ಬಹಳವಾಗಿ ಹೆಚ್ಚಿಸುತ್ತದೆ.

## ೬. ಆವೇಗ

ವಿಜಯಗಳನ್ನು ಆಚರಿಸುವದು ಸಭೆಯ ಆವೇಗವನ್ನು ಹೆಚ್ಚಿಸುತ್ತದೆ. ಯಶಸ್ಸನ್ನು ಆಚರಿಸುವಾಗ, ನಾವು ನಿರ್ದಿಷ್ಟವಾಗಿರುವ ಗುರಿಯನ್ನು ಸಾಧಿಸುವ ಸಾಮರ್ಥ್ಯವುಳ್ಳವರಾದ್ದರಿಂದ, ಇನ್ನೂ ಹೆಚ್ಚಿನ ಗುರಿ ಸಾಧಿಸುವ ಸಾಮರ್ಥ್ಯ ನಮಗಿದೆ ಎಂಬ ಅರಿವನ್ನು ಪ್ರತಿಯೊಬ್ಬರಿಗೆ ಜ್ಞಾಪಕಪಡಿಸುತ್ತದೆ.

## ೭. ಸಕಾರಾತ್ಮಕ ಮನೋಭಾವ

ವಿಜಯಗಳನ್ನು ಆಚರಿಸುವದು ನಕಾರಾತ್ಮಕ ವಿಷಯಗಳ ಬಗ್ಗೆ ಚಿಂತಿಸದೆ ಸಕಾರಾತ್ಮಕ ವಿಷಯಗಳ ಬಗ್ಗೆ ಚಿಂತಿಸಲು ಸಹಾಯ ಮಾಡುತ್ತದೆ. ಒಂದುವೇಳೆ ನಿಮ್ಮ ಸಭೆಯ ಆರ್ಥಿಕ ಸ್ಥಿತಿಯಲ್ಲಿ ಏರುಪೇರುಗಳಾಗಿದ್ದರೂ, ಇನ್ನೂ ಅನೇಕ ವಿಷಯಗಳ ವಿಜಯವನ್ನು ನೀವು ಆಚರಿಸಬಹುದಾಗಿದೆ. ಕರ್ತನಿಗಾಗಿ ಇನ್ನೂ ಒಳ್ಳೆಯ ಕಾರ್ಯಗಳು ನಡೆಯುತ್ತಿವೆ ಎಂದು ನಿಮ್ಮ ತಂಡದವರಿಗೆ ಜ್ಞಾಪಕಪಡಿಸುವದರೊಂದಿಗೆ ಆಚರಿಸುವ ಮೂಲಕ ಅವರನ್ನು ಮತ್ತಷ್ಟು ಪ್ರೋತ್ಸಾಹಪಡಿಸಿರಿ.

## ೮. ಸ್ನೇಹ

ನಮ್ಮ ತಂಡದೊಂದಿಗೆ ವಿಜಯಗಳನ್ನು ಆಚರಿಸುವದು, ತಂಡದ ಸದಸ್ಯರ ನಡುವೆ ಸ್ನೇಹವನ್ನು ಬೆಳೆಸುತ್ತದೆ. ಕೇವಲ ಸೇವೆಯ ಸಂಬಂಧವಾಗಿ ಮಾತ್ರವಲ್ಲದೆ ನಾವು ಸಹೋದರ ಹಾಗೂ ಸಹೋದರಿಯರೊಂದಿಗೆ ಆತ್ಮೀಕವಾಗಿ ಬೆರೆಯಲು ಸಹಾಯವಾಗುತ್ತದೆ. ನಮ್ಮ ತಂಡದಲ್ಲಿರುವ ಇತರರೊಂದಿಗೆ ಹೆಚ್ಚು ವೈಯಕ್ತಿಕವಾಗಿ ಬೆರೆಯಲು ಇದರಿಂದ ಸಹಾಯವಾಗುತ್ತದೆ.

## ೯. ಬಲಪಡಿಸುವ ಸ್ವಭಾವಗಳು

ವಿಜಯಗಳನ್ನು ಆಚರಿಸುವದು ವಿಶೇಷವಾದ ಸಾಧನೆಗಳಿಗಾಗಿ ಸಹೋದರ ಅಥವಾ ಸಹೋದರಿಯರನ್ನು ನಿರ್ದಿಷ್ಟವಾದ ಸನ್ಮಾನಿಸಲು ಅವಕಾಶ ಒದಗಿಸುತ್ತದೆ. ಯಾವ ಕಾರ್ಯಗಳು ಚೆನ್ನಾಗಿ ನಡೆದವು ಅಂದರೆ-ಹೆಸರುಗಳನ್ನು ಕರೆಯುವದು, ದಿನಾಂಕಗಳು, ಒಳ್ಳೆಯ ಯೋಚನೆಗಳು ಮತ್ತು ಮಾಡಲಾಗದ ಕಾರ್ಯಗಳ ಬಗ್ಗೆ ನಮಗೆ ಸ್ಪಷ್ಟತೆ ಇದ್ದರೆ-ಆಚರಣೆಯನ್ನು ಸಮರ್ಥಿಸಿಕೊಳ್ಳುವದು ಮಾತ್ರವಲ್ಲ ಬದಲಾಗಿ ನಾವು ಗೌರವಿಸುವ ಸ್ವಭಾವಗಳನ್ನು ಬಲಪಡಿಸುತ್ತೇವೆ. ಭವಿಷ್ಯದಲ್ಲಿ ಇಂಥ ಆಚರಣೆಗಳನ್ನು ಯಾವ ರೀತಿ ನಡೆಸಬಹುದು ಎಂಬದು ಇದರಿಂದ ಇಡೀ ತಂಡಕ್ಕೆ ಗೊತ್ತಾಗುತ್ತದೆ.

## ೧೦. ಬೇಸರಿಕೆಯ ಸಂಗಡ ಹೋರಾಟ

ವಿಜಯಗಳನ್ನು ಆಚರಿಸುವದು ನಮ್ಮ ಮನಸ್ಸುಗಳನ್ನು ಪ್ರಾಪಂಚಿಕ ಕಾರ್ಯಗಳಾದ ಡೈಪರ್ಸ್ ಬದಲಾಯಿಸುವದು ಅಥವಾ ನಮ್ಮ ೨೩೧ನೇ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವ ಕಾರ್ಯಗಳಿಂದ ಬೇರ್ಪಡಿಸುತ್ತದೆ. ನಮ್ಮ ತಂಡದವರ ಮನಸ್ಥಿತಿಯನ್ನು "ಬೇಸರದ ಕಾರ್ಯಗಳಿಂದ" "ಆಚರಣೆಯ" ಕಡೆಗೆ ನಾವು ಎಷ್ಟು ಬೇಗ ಬದಲಾಯಿಸುತ್ತೇವೋ ಅಷ್ಟು ಬೇಗ ನಮ್ಮ ತಂಡದವರಿಗೆ ಹೊಸದಾದ ಸಕಾರಾತ್ಮಕ ಮನಸ್ಥಿತಿ ದೊರೆಯುತ್ತದೆ.

**ವಿಜಯಗಳನ್ನು ಆಚರಿಸುವದು ನಿಮ್ಮ ತಂಡವನ್ನು ಪ್ರೇರಣೆಯಲ್ಲಿ ನಡೆಸಲು ಮತ್ತು ನಿಜವಾಗಿಯೂ ಪ್ರಾಮುಖ್ಯವಾಗಿರುವ ಸಂಗತಿಗಳಿಗೆ ಗಮನ ಕೊಡಲು ಸಹಾಯ ಮಾಡುತ್ತದೆ.**